# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128–2011** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಾಗಣ್ಣ<br>ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 17–11–2022. |

**<u>ಪಾಟೀ ಸವಾಲುಃ  ಶ್ರೀ ಕೆ.ಟಿ.ಆರ್  ವಕೀಲರಿಂದಃ</u>**

ನಾನು ಅವಿದ್ಯಾವಂತ, ನನಗೆ ಸಹಿ ಮಾಡಲು ಬರುವುದಿಲ್ಲ, ನಾನು ಹೆಬ್ಬೆಟ್ಟು ಗುರುತನ್ನು ಹಾಕುತ್ತೇನೆ. ನಮ್ಮ ಊರಿನಲ್ಲಿ ಸುಮಾರು 450 ಕುಳ ಇರುತ್ತವೆ. ನಮ್ಮ ಊರಿನಲ್ಲಿ ಪಾಲು ಮಾಡಿಕೊಳ್ಳುವ ಸಮಯದಲ್ಲಿ ನಮ್ಮನ್ನು ಕರೆಸಿದರೆ ಹೋಗುತ್ತೇವೆ. ನಮ್ಮ ಊರಿನಲ್ಲಿ ಪಾಲು ಮಾಡಲು ಕರೆದರು ಅಥವಾ ಕರೆಯದೇ ಇದ್ದರೂ ನಾವು ಹೋಗುತ್ತೇವೆ. ನಾನು ಸುಮಾರು 30–35 ವರ್ಷಗಳಿಂದಲೂ ಪಾಲು ಮಾಡಿಕೊಳ್ಳುವ ಸಂದರ್ಭದಲ್ಲಿ ಹೋಗುತ್ತೇನೆ. ನಾವು ಹೇಳಿದ್ದನ್ನು ಕೇಳಿಕೊಂಡು ಬರುವುದಿಲ್ಲ, ನಾವೇ ಹೋಗಿ ಪಾಲು ಮಾಡಿಸುತ್ತೇವೆ. ನಾವು ಪಾಲು ಮಾಡಿಸಿದ್ದನ್ನು ಬರವಣಿಗೆ ಮಾಡಲಾಗುತ್ತದೆ. 30–35 ವರ್ಷಗಳಿಂದ 3–4 ಬಾರಿ ಕರೆದರು ಮರಪ್ಪನ ಮಕ್ಕಳು ಪಾಲು ಮಾಡಿಕೊಳ್ಳಲು ಬಂದಿರುವುದಿಲ್ಲ. ಪಾಲು ಮಾಡಿಕೊಳ್ಳಲು ಕರೆದಾಗ ಯಾರಾದರೂ ಬರದಿದ್ದರೆ ಬಿಟ್ಟುಬಿಡುತ್ತೇವೆ. ಊರಿನಲ್ಲಿ ನಮ್ಮನ್ನು ಬಿಟ್ಟು ಪಾಲು ಮಾಡಿಕೊಳ್ಳಲು ಬರುವುದಿಲ್ಲ. ನನಗೆ ಊರಿನಲ್ಲಿ ಜಮೀನು ಇದ್ದು ನಾನು ಅವಿದ್ಯಾವಂತನಾಗಿದ್ದು ನನಗೆ ಚೆಕ್ಕುಬಂದಿಯನ್ನು ಹೇಳಲು ಬರುವುದಿಲ್ಲ. ನನ್ನ ಪತ್ನಿ 15 ವರ್ಷಗಳ ಹಿಂದೆ ಗ್ರಾಮ ಪಂಚಾಯ್ತಿ ಸದಸ್ಯಳಾಗಿದ್ದು ಆಗಾಗಿ ನನ್ನನ್ನು ಪಂಚಾಯ್ತಿಗೆ ಕರೆಯುತ್ತಾರೆ. ಸಾಕ್ಷಿ ಮುಂದುವರೆದು ಅದಕ್ಕಿಂತ ಹಿಂದಿನಿಂದಲೂ ಪಂಚಾಯ್ತಿಗೆ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ.

2. ನನಗೆ ದಾವಾ ಷೆಡ್ಯೂಲ್ ಸ್ವತ್ತುಗಳ ಗೊತ್ತು, ಆದರೆ ಅದರ ಚೆಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ನನಗೆ ದಾವಾ ಷೆಡ್ಯೂಲ್ ಸ್ವತ್ತುಗಳು ಗೊತ್ತಿಲ್ಲದೇ ಇದ್ದರೂ ಗೊತ್ತಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಷೆಡ್ಯೂಲ್ ಸ್ವತ್ತುಗಳು ಗೊತ್ತಿಲ್ಲದೇ ಇರುವುದರಿಂದ ಅವುಗಳ ಚೆಕ್ಕುಬಂದಿಯನ್ನು ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಜಮೀನಿನ ಪಕ್ಕದ ಪಕ್ಕದಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳ ಇರುತ್ತವೆ ಎಂದು

ನುಡಿಯುತ್ತಾರೆ. ನನ್ನ ಜಮೀನಿನ ಅಕ್ಕ-ಪಕ್ಕದಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳ ಇಲ್ಲದೇ ಇದ್ದರೂ ವಾದಿಯವರಿಗೆ ಸಹಾಯ ಮಾಡಲು ಜಮೀನು ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.34 ರಲ್ಲಿ 27 ಗುಂಟೆ ಜಮೀನನ್ನು ಕರಿಯಪ್ಪನ ನಂದೀಶ ರವರು ಖರೀದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿಗೆ ತಿಳಿಯದಂತೆ ಕೊಂಡು ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮರಪ್ಪನವರಿಂದ 14 ನೇ ಪ್ರತಿವಾದಿ ದಾವಾ ಷೆಡ್ಯೂಲ್ ಸ್ವತ್ತನ್ನು ಕೊಂಡುಕೊಂಡ ವಿಚಾರ ನನಗೆ ಸುಮಾರು 16-17 ವರ್ಷಗಳ ಹಿಂದೆ ತಿಳಿದಿತ್ತು. ನಮಗೆ ಕ್ರಯವಾಗಿದೆ ಎಂದು ತಿಳುವಳಿಕೆ ಬರುವ ಎಷ್ಟು ವರ್ಷಗಳ ಹಿಂದೆ ಮರಪ್ಪನವರು 14 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹೇಳುವಂತೆ 16-17 ವರ್ಷಗಳ ಹಿಂದೆ ಮರಪ್ಪನವರು 14 ನೇ ಪ್ರತಿವಾದಿಗೆ ಕ್ರಯ ಮಾಡಿದ ವಿಚಾರ ನನಗೆ ತಿಳಿಯದೇ ಇದ್ದರೂ, ವಾದಿಗಳಿಗೆ ಸಹಾಯ ಮಾಡಲು ಸುಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಚುನಾವಣೆಗೆ ಸ್ವರ್ಧಿಸಿದ್ದ ಸಮಯದಲ್ಲಿ 1 ನೇ ವಾದಿಯವರು ನನಗೆ ಚುನಾವಣೆಗೆ ಸಹಾಯ ಮಾಡಿದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 14 ನೇ ಪ್ರತಿವಾದಿಯವರ ಕುಟುಂಬದವರು ಚುನಾವಣೆಗೆ ಸ್ವರ್ಧಿಸಿದ್ದರಿಂದ ಅವರ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಜಕೀಯ ಪಕ್ಷದಲ್ಲಿ ಇರುವುದರಿಂದ ಯಾರು ಸಹ ನನ್ನನ್ನು ಪಾಲು ಮಾಡಿಕೊಳ್ಳಲು ಕರೆಯದೇ ಇದ್ದರೂ ಸಹ ಕರೆಯುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**